



ಮಂಜುನಾಥ್ ಕಿರಣ್

ಮಿಲಿಟರಿ ಕಾರ್ಯಾಚರಣೆಯನ್ನು ವರದಿಗಾರಿಕೆ ಮಾಡುವುದು ಎಂದು ಸರಳೀಕರಿಸಬಹುದು. ಭಾರತೀಯ ಸೇನೆಯಲ್ಲಿಯೂ ಈ ರೀತಿ ಇರುತ್ತದೆ. ಯಾವುದಾದರೂ ದೊಡ್ಡ ಕಾರ್ಯಾಚರಣೆ ನಡೆಸುವ ಸಂದರ್ಭ ಬಂದಾಗ 'ಎಂಬೆಡ್'ಗೆ ಅವಕಾಶ ದೊರೆಯುತ್ತದೆ. ಗಲಭೆ ಅಥವಾ ಯುದ್ಧಪೀಡಿತ ಪ್ರದೇಶದಲ್ಲಿ ಪ್ರಜಾಸರ್ಕಾರದ ಸೇನೆ ಏನು ಮಾಡುತ್ತಿದೆ ಎನ್ನುವುದನ್ನು ಜಗತ್ತಿಗೆ ತಿಳಿಸಬೇಕು. ಈ ದೃಷ್ಟಿಯಿಂದ ಎಂಬೆಡ್ ಮಾಡಿಕೊಳ್ಳುತ್ತಾರೆ. ನಮ್ಮ ಸಂಸ್ಥೆ ಒಂದೇ ಅಲ್ಲದೆ, ಜಗತ್ತಿನ ಬೇರೆ ಬೇರೆ ಸಂಸ್ಥೆಗಳೂ ಎಂಬೆಡ್‌ಗಳಾಗಿದ್ದವು.

ಮೊದಲ ದಿನ ಕಾಬೂಲ್‌ನಿಂದ ಜಲಾಲಾಬಾದ್‌ಗೆ ಕರೆದುಕೊಂಡು ಹೋದರು. ಅಲ್ಲಿಂದ ನನ್ನ ಎಂಬೆಡ್ ಶುರುವಾಯಿತು – ಸುಮಾರು 16 ದಿನಗಳ ಕೆಲಸವದು. ನಂತರ ಹತ್ತು ದಿನ ಕಾಬೂಲ್‌ನ ನಮ್ಮ ಕಚೇರಿಯಲ್ಲಿ ಕೆಲಸ. ಎಂಬೆಡ್ ಆದ ಮೊದಲ ದಿನ ಆಸಕ್ತಿಯ ಕ್ಷೇತ್ರ, ಕನಸು, ಬಂದ ಉದ್ದೇಶವನ್ನು ಅಧಿಕಾರಿಗಳು ತಿಳಿದುಕೊಂಡರು. ಸುರಕ್ಷತೆ ಬಗ್ಗೆ ತಿಳಿಸಿ, ಸೇನಾ ತುಕಡಿಯೊಂದಕ್ಕೆ ನಿಯೋಜಿಸಿದರು. ಸೇನಾ ತುಕಡಿಯೊಂದಿಗೆ ಅವರ ಕಾರ್ಯಕ್ಷೇತ್ರಕ್ಕೆ ಪಯಣ. ಅಂದಹಾಗೆ, ಈ ಪಯಣಕ್ಕೆ ಮೊದಲು – ಸ್ವಯಂ ಆಸಕ್ತಿಯಿಂದ ಇಲ್ಲಿಗೆ ಬಂದಿದ್ದೇನೆ. ನನ್ನ ಜೀವರಕ್ಷಣೆ ನನ್ನ ಹೊಣೆ. ಏನಾದರೂ ಅಪಾಯ ಸಂಭವಿಸಿದರೆ ಅದಕ್ಕೆ ಯಾರನ್ನೂ ದೂರುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದೆ.

## ಗೆರಿಲ್ಲಾ ಗುಮ್ಮಗಳು!

ಚಳಿಗಾಲ ಇನ್ನೂ ಮುಗಿದಿರಲಿಲ್ಲ. ಮಂಜು ಕಡಿಮೆ ಆಗಿತ್ತು. ಚಳಿ ಮಾತ್ರ ಇನ್ನೂ ಇತ್ತು. ಒಂದು ರೀತಿಯಲ್ಲಿ ಅದು ಯುದ್ಧ ವಿರಾಮ ಕಾಲ. ಭಯೋತ್ಪಾದಕರು ನೇರ ಸೆಣಸಾಡುವ ಸೇನಾನಿಗಳಲ್ಲ. ಅವರು ಅವಿತು ದಾಳಿ ಮಾಡುತ್ತಾರೆ. ಅದನ್ನೇ 'ಗೆರಿಲ್ಲಾ ಯುದ್ಧ' ಎಂದು ಕರೆಯುತ್ತಾರೆ. ಉಗ್ರರ ಗುಂಪು ಬೆಟ್ಟ–ಗುಡ್ಡಗಳ ಹಿಂದೆ ಅವಿತು ದಾಳಿ ಮಾಡಿ, ಹಿಂದಕ್ಕೆ ಓಡಿ ಹೋಗುತ್ತಾರೆ. ಮಕ್ಕಳಿಗೆ ಭೀತಿ ಹುಟ್ಟಿಸುವ ಗುಮ್ಮನಂತೆ ನಾಗರಿಕರ ಜೊತೆ ಉಗ್ರರು ಆಟ ಆಡುತ್ತಾರೆ. ಮುಖಾಮುಖಿ ಹೋರಾಟ ಮಾಡುವುದು ಅಪರೂಪ. ಕುತಂತ್ರದಿಂದಲೇ ತಮ್ಮ ಉದ್ದೇಶ ಈಡೇರಿಸಿಕೊಳ್ಳಲು ಹವಣಿಸುತ್ತಾರೆ. ಮೈಕೊರೆಯುವ ಚಳಿಯ ಕಾರಣದಿಂದಲೋ ಏನೋ ಆ ದಿನಗಳಲ್ಲಿ ಅವರ ಚಟುವಟಿಕೆ ಕಡಿಮೆ ಇತ್ತು.

ತಾಲಿಬಾನ್ ಉಗ್ರರು ತಮ್ಮ ಕೃತ್ಯವನ್ನು ಯೋಜನಾಬದ್ಧವಾಗಿ ನಡೆಸುತ್ತಿದ್ದರು. ರಿಮೋಟ್ ಬಾಂಬ್‌ಗಳಿಂದ ಬ್ಲಾಸ್ಟಿಂಗ್ ಮಾಡುವ ತಂತ್ರಜ್ಞಾನ ಅವರ ಬಳಿಯಿತ್ತು. ಈ ರೀತಿಯ ಸುಮಾರಷ್ಟು ದಾಳಿಗಳನ್ನು ಅವರು ಈ ಹಿಂದೆ ಮಾಡಿದ್ದರು. ಆ ಕಾರಣಕ್ಕೆ ಅಮೆರಿಕ ಸೇನೆ ರಸ್ತೆ ಮಾರ್ಗದಲ್ಲಿ ಹೆಚ್ಚಾಗಿ ಸಂಚರಿಸುತ್ತಿರಲಿಲ್ಲ. ಅನಿವಾರ್ಯದ ಸಂದರ್ಭದಲ್ಲಿ ಮಾತ್ರ ವಾಹನದಲ್ಲಿ ಹೋಗುತ್ತಿದ್ದರು. 4 ಕಿ.ಮೀ. ದೂರದ ಅಂತರವನ್ನು ತಲುಪಬೇಕೆಂದರೂ ಹೆಲಿಕಾಪ್ಟರ್ ಬಳಸುತ್ತಿದ್ದರು. ಗೆರಿಲ್ಲಾಗಳ ಅನಿರೀಕ್ಷಿತ ದಾಳಿ ಅಥವಾ ಸ್ಫೋಟ ತಮ್ಮ ಲೆಕ್ಕಾಚಾರವನ್ನು ಉಲ್ಟಾ ಮಾಡುತ್ತದೆ ಎನ್ನುವ ಆತಂಕ ಅವರಿಗಿತ್ತು. ಹೊಂಚುಹಾಕಿ ದಾಳಿ ಮಾಡುವ ಉಗ್ರರ ಕುತಂತ್ರವನ್ನು 'ಆ್ಯಂಬುಶ್' (Ambush) ಎನ್ನುತ್ತಾರೆ.

## ಬ್ಲ್ಯಾಕ್ ಹಾಕ್ ಜರ್ನಿ

ಹೆಲಿಕಾಪ್ಟರ್‌ನಲ್ಲಿ, ನಾನೂ ಪ್ರಯಾಣ ಮಾಡಿದ್ದೆ. ಅದೂ ಬ್ಲ್ಯಾಕ್ ಹಾಕ್ (black hawk) ಹೆಲಿಕಾಪ್ಟರ್‌ನಲ್ಲಿ ಪಯಣಿಸುವ ಅವಕಾಶ ನನಗೆ ದೊರೆತಿತ್ತು. ಅದಕ್ಕೂ ಮೊದಲು ಅದನ್ನು ಕೇವಲ ಚಿತ್ರದಲ್ಲಿ ನೋಡಿದ್ದೆ; ಹೆಲಿಕಾಪ್ಟರ್‌ಗಳ ಕುರಿತ 'ಬ್ಲ್ಯಾಕ್ ಹಾಕ್ ಡೌನ್' (Black Hawk Down) ಸಿನಿಮಾದಲ್ಲಿ ನೋಡಿದ್ದೆ. ಕಲ್ಪನೆಯ ಕನಸಿನಂತಿದ್ದ ಕಾಪ್ಟರ್‌ನಲ್ಲಿ ಜಲಾಲಾಬಾದ್‌ನಿಂದ ಅಮೆರಿಕದ ಸೇನಾ ತುಕಡಿಯಿದ್ದ ಹೊನಾಕರ್ ಮಿರಾಕಲ್‌ಗೆ (Honaker Miracle) ಪ್ರಯಾಣ ಮಾಡಿದೆ. ಅದು ಅಮೆರಿಕ ಇಟ್ಟ ಹೆಸರು.



ಅಪಾಯದ ರಾತ್ರಿ ಬೈನಾಕ್ಯುಲರ್ ಶೋಧಕ್ಕೂ ಸಿಗದಂತೆ ಕೆಂಪು ಬಣ್ಣಕ್ಕೆ ತಿರುಗಿಸುವ ಟಾರ್ಚ್